| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1699/2025**

ಸಾಕ್ಷಿದಾರನ ಹೆಸರು ಃ ಪ್ರದೀಪ್ ಆಚಾರ್ಯ ಪಿ.ಡಬ್ಲ್ಯೂಃ 1

ತಂದೆಯ ಹೆಸರುಃ ಸದಾಶಿವ ಆಚಾರ್ಯ ಸಿ.ಡಬ್ಲ್ಯೂಃ 1

ಪ್ರಾಯ ಃ 36 ವರ್ಷ

ಉದ್ಯೋಗ ಃ ಇಂಜಿನಿಯರ್

ವಾಸ ಃ ಬೆಂಗಳೂರು

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 16-02-2026

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಆರೋಪಿಯ ಪರಿಚಯ ಇದೆ. ಅವರು ನನ್ನ ಚಿಕ್ಕಪ್ಪ.

ಚಾಸಾ-2 ಪರಿಚಯ ಇಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಅಪಘಾತದಿಂದ ಯಾರು ಯಾರಿಗೆ ಪೆಟ್ಟಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಅಪಘಾತ ಯಾವ ವಾಹನಗಳ ನಡುವೆ ಸಂಭವಿಸಿರುತ್ತದೆ ಎಂದು ಗೊತ್ತಿರುವುದಿಲ್ಲ. ಅಪಘಾತಕ್ಕೆ ಏನು ಕಾರಣ ಎಂದು ಗೊತ್ತಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ದೂರು ನೀಡಿರುವುದಿಲ್ಲ.

ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ, ಎಲ್ಲಿ ಹಾಕಿರುತ್ತೇನೆ ಎಂದು ಗೊತ್ತಿಲ್ಲ.

ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರು ಹಾಗೂ ನಕಾಶೆ ತಯಾರಿಸಿ, ಭಾವಚಿತ್ರ ತೆಗೆದಿರುವುದಿಲ್ಲ. ಸಾಕ್ಷಿಯು ತಕ್ಷೀರು ಸ್ಥಳ ಮಹಜರು, ನಕಾಶೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು, ನಕಾಶೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ಪೋಲಿಸು ಠಾಣೆಯಲ್ಲಿ ಮಾಡಿದ್ದು, ಯಾವ ವಿಚಾರಕ್ಕೆ ಮಾಡಿರುತ್ತೇನೆ ಎಂದು ಗೊತ್ತಿಲ್ಲ.

ಸಾಕ್ಷಿಯು ತಕ್ಷೀರು ಸ್ಥಳ ಮಹಜರು ಕಾಲದಲ್ಲಿ ತೆಗೆದ ಭಾವಚಿತ್ರದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸದ್ರಿ ಭಾವಚಿತ್ರವನ್ನು ಎಲ್ಲಿ, ಯಾರು, ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿಯು ಅಪಘಾತಕ್ಕೆ ಸಂಬಂಧಿಸಿದ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿಃ 04-08-2025 ರಂದು ನಾನು ಪೋಲಿಸರಿಗೆ ಪಿರ್ಯಾದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 05-08-2025 ರಂದು ಪೋಲಿಸರು ಕಾರ್ಕಳ ತಾಲೂಕು, ನೀರೆ ಗ್ರಾಮದ ನೀರೆ ಜೆಡ್ಡು ಎಂಬಲ್ಲಿ ಚಾಸಾ-1 ರವರು ತೋರಿಸಿಕೊಟ್ಟಂತೆ ಮಧ್ಯಾಹ್ನ 12.15 ರಿಂದ 1.00 ರವರೆಗೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ತಕ್ಷೀರು ಸ್ಥಳ ಮಹಜರು ಮಾಡಿ, ನಕಾಶೆ ತಯಾರಿಸಿ, ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಚಿಕ್ಕಪ್ಪನಾಗಿದ್ದು, ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್.ಕೆ. ವಕೀಲರಿಂದ :: ಏನು ಇಲ್ಲ.

ಮರುವಿಚಾರಣೆ :: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ